ತರಬೇಕೆಂದು ಇದ್ದೆವು. ಆದರೆ ಸ್ವಲ್ಪ ತರುವುದಕ್ಕೆ ಇದು ಆಗಲಿಲ್ಲ. ನಾಳೆ ಅಲ್ಲ ನಾಡಿದ್ದು ಶುಕ್ರವಾರ ಬೆಳಗ್ಗೆ ಅಧಿವೇಶನದಲ್ಲಿ ಇದನ್ನು ತರುತ್ತೇವೆ.

ಅಧ್ಯಕ್ಷರು : ಆಯಿತು. ಈಗ ಶೂನ್ಯ ವೇಳೆ. ಎಲ್ಲರ ವಿಷಯವನ್ನು ತೆಗೆದುಕೊಳ್ಳುತ್ತೇನೆ. Alliance University ಬಗ್ಗೆ, ಹಾಲಾಡಿ ಶ್ರೀನಿವಾಸ್ ಶೆಟ್ಟಿಯವರು ಕೇಳಿದ್ದು. ಅರ್ಧ ಗಂಟೆ ಕಾಲ ಚರ್ಚೆಯನ್ನು ನಾಳೆ ತೆಗೆದುಕೊಳ್ಳುತ್ತೇನೆ.

4. **ವಿಷಯ : Private University established by State Government Legislature ಎಂಬ ಪದದಲ್ಲಿ 'established by Legislature' ಎಂಬುದು ಸರಿಯಾದ ಪದವಲ್ಲವಾದ್ದರಿಂದ ಸೂಕ್ತ ಪದವನ್ನು ಉಪಯೋಗಿಸುವ ಬಗ್ಗೆ.**

ಶ್ರೀ ಬಂಡೆಪ್ಪ ಕಾಶೆಂಪೂರ (ಬೀದರ್ ದಕ್ಷಿಣ) : ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು flight ನಲ್ಲಿ ಬರುವಾಗ Alliance Private University ಯವರ ಒಂದು Advertisement ನೋಡಿದೆ. ಏನೆಂದರೆ, It is a private University established by State Government Legislature ಎಂದು ಬರೆದಿದ್ದೀರಾ? ಅದು ತಪ್ಪಿದೆ. 'Established by' ಎಂದು ಬರಬಾರದು. ಏಕೆಂದರೆ, ಎಲ್ಲೋ ಒಂದು ಕಡೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದಕ್ಕೆ ಸೂಕ್ತವಾದ ಒಂದು ಪದವನ್ನು use ಮಾಡಬೇಕು. ಏಕೆಂದರೆ established ಎಂದರೆ House established ಎಂದು ಆಗುತ್ತದೆ. House is a body ಅದು ಯಾವುದೇ ಬಿಲ್ ಬಂದರೂ ಪಾಸ್ ಮಾಡಿಕೊಡುತ್ತಾರೆ. ಆದರೆ Established by legislature ಎಂದರೆ ಅದು ಎಲ್ಲೋ ಒಂದು ಕಡೆ Wrong signal ಹೋಗುತ್ತದೆ. ದಯವಿಟ್ಟು ಅದಕ್ಕೆ ಮಾನ್ಯ ಮಂತ್ರಿಗಳು ಒಂದು ಸೂಕ್ತವಾದ ಪದ use ಮಾಡಿ ಅದಕ್ಕೆ rectify ಮಾಡುವಂತ

ಕೆಲಸವನ್ನು ಮಾಡಬೇಕು ಎನ್ನುವ ನಿಟ್ಟಿನಲ್ಲಿ ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ಪದವಿ ಪೂರ್ವ ಕಾಲೇಜಿನ ಬಗ್ಗೆ ಮೊನ್ನೆಯಿಂದ ಚರ್ಚೆಗೆ ಕೊಡಬೇಕೆಂದು ಕೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಕರೆದು ಮಾತನಾಡುತ್ತೇನೆಂದು ಹೇಳಿದ್ದರು. ಇವತ್ತಿನವರೆಗೂ ಅವರನ್ನು ಕರೆದು ಚರ್ಚೆ ಮಾಡಿಲ್ಲ. ಇವತ್ತು ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಇವತ್ತು ತೆಗೆದುಕೊಳ್ಳುತ್ತೇನೆ, ಈಗ ಕರೆಯುತ್ತೇನೆ. ಮೊದಲು ಬಂಡೆಪ್ಪ ಕಾಶೆಂಪೂರವರಿಗೆ ಉತ್ತರ ಬರಲಿ. Alliance University ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಡಾ: ವಿ.ಎಸ್. ಆಚಾರ್ಯ (ಮಾನ್ಯ ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಡೆಪ್ಪ ಕಾಶೆಂಪೂರವರ ಶೂನ್ಯವೇಳೆಯಲ್ಲಿ ಅವರು ಹೇಳಿದ ಹಾಗೆ, Alliance University is a Private University established by the Sate Legislature by Karnataka Act No.34. Act No.34 ಪ್ರಕಾರ ಅದಕ್ಕೆ ಒಂದು ವಿಶೇಷವಾದ Act ಮಾಡಿ Legislature ನಲ್ಲಿ pass ಮಾಡಿ ಕೊಟ್ಟಿರುವಂಥದ್ದು ಎಂದು ಹೇಳಿ ಅವರು ತೋರಿಸಬೇಕಾಗಿತ್ತು. Established under ಎಂದು ಆಗಬೇಕಿತ್ತು, ಅದು ಬಿಟ್ಟು by ಎಂದು ಬರೆದಿದ್ದಾರೆ ಅದು ತಪ್ಪಾಗಿದೆ.

ಶ್ರೀ ಬಂಡೆಪ್ಪ ಕಾಶೆಂಪೂರ : Establish ಎನ್ನುವುದು ತಪ್ಪಿದೆ.

ಡಾ: ವಿ.ಎಸ್. ಆಚಾರ್ಯ : ಅದು ಸರಿ ಇದೆ. ಅದು ಕರ್ನಾಟಕ ಅಧಿನಿಯಮ–34 ರನ್ವಯ ಸ್ಥಾಪಿತವಾಗಿದೆ. ಈ ವಿಶ್ವವಿದ್ಯಾಲಯವು ವ್ಯವಹಾರ ಆಡಳಿತ ಮತ್ತು ವ್ಯವಸ್ಥಾಪನೆ ಸಾರ್ವಜನಿಕ ನೀತಿ ಮತ್ತು ಆಡಳಿತ, ತಂತ್ರಜ್ಞಾನ, ಆರೋಗ್ಯ ವಿಜ್ಞಾನ ಮತ್ತು ಪರಿಸರ ಹವಾಮಾನ ಬದಲಾವಣೆ ಜಾಗತೀಕರಣ ಮತ್ತು ರಾಷ್ಟ್ರಸೀಮಾತೀತ ಸಂಬಂಧಗಳು ಸೇರಿದಂತೆ ಜೀವ ವಿಜ್ಞಾನ ವಿಷಯಗಳಲ್ಲಿ ಬೋಧನೆ ನೀಡುವ ಉದ್ದೇಶ ಹೊಂದಿದೆ.ಈ ವಿಶ್ವವಿದ್ಯಾನಿಲಯದ ಸ್ಥಾಪನೆ ದಿನಾಂಕ: 2.8.2010 ರಿಂದ ಜಾರಿಗೆ ಬಂದಿದೆ. ಈ ವಿಶ್ವವಿದ್ಯಾಲಯದ rating ಇದು important.

ಶ್ರೀ ಬಂಡೆಪ್ಪ ಕಾಶೆಂಪೂರ : ಅವರ rating ನಾನು ಏನು ಪ್ರಶ್ನೆ ಮಾಡುತ್ತಿಲ್ಲ. Only established ಎಂದು House ನ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಸೂಕ್ತವಾದ ಪದವನ್ನು ಉಪಯೋಗಿಸಬೇಕು. ಅವರಿಗೆ ಎಚ್ಚರಿಕೆಯನ್ನು ಕೊಡಿ.

ಡಾ: ವಿ.ಎಸ್. ಆಚಾರ್ಯ : ಅವರಿಗೆ ಎಚ್ಚರಿಕೆಯ್ನು ಕೊಟ್ಟು Established by the ಆಗಬಾರದು, under the Act ಎಂದು ಮಾಡಬೇಕೆಂದು ಹೇಳುತ್ತೇವೆ.

ಅಧ್ಯಕ್ಷರು : ಆಯಿತು. ಮಾನ್ಯ ರೇವಣ್ಣವರೆ, ಏನ ಪ್ರಸ್ತಾಪ ಮಾಡಬೇಕೆಂದು ಕೇಳಿದಿರಿ.

5. ವಿಷಯ : ಪದವಿ ಪೂರ್ವ ಉಪನ್ಯಾಸಕರು ವಿವಿಧ ಬೇಡಿಕೆಗಳನ್ನಿಟ್ಟು ಧರಣಿ ಮಾಡುತ್ತಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಪದವಿ ಪೂರ್ವ ಉಪನ್ಯಾಸಕರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಸಾಯಂಕಾಲದೊಳಗೆ ಅವರನ್ನು ಮೀಟಿಂಗ್ ಕರೆದು ಒಂದು ತೀರ್ಮಾನ ಮಾಡುತ್ತೇನೆಂದು ಹೇಳಿದ್ದರು. ಆದರೆ ಮಾರನೆಯ ದಿವಸ ಪತ್ರಿಕೆಯಲ್ಲಿ ನೋಡಿದೆ, ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆಂದು ಬಂದಿತ್ತು. ಎರಡು ನಿಮಿಷ್, ಮಾನ್ಯ ಸಚಿವರು ಉತ್ತರವನ್ನು ಏನಾದರೂ ಕೊಡಲಿ. ನನಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಿರಿ. ದಯಮಾಡಿ ಮಾನ್ಯ ಶಿಕ್ಷಣ ಸಚಿವರು ತಾಳ್ಮೆಯಿಂದ ಕುಳಿತುಕೊಳ್ಳಬೇಕು. 1972 ರಿಂದ 1987ನೇ ಇಸವಿಯವರೆಗೆ ಪದವಿ ಪೂರ್ವ ಕಾಲೇಜಿನ Lecturer, First Grade College Lecturer, Tahasildar, ಸಹಾಯಕ ಆಯುಕ್ತರು ಎಲ್ಲಾ ಒಂದೇ ಸ್ಕೇಲ್ ಇತ್ತು. 1987 ರಿಂದ ಈಚೆಗೆ ಪದವಿಪೂರ್ವ ಕಾಲೇಜಿನವರಿಗೆ ಒಂದು ಸಂಬಳ, ಪ್ರಥಮ ದರ್ಜೆಯವರಿಗೆ, ತಹಶೀಲ್ದಾರರಿಗೆ ವ್ಯತ್ಯಾಸ ಮಾಡಿರುವ ಉದ್ದೇಶ ಏನು? ಬೆಂಗಳೂರಿನಲ್ಲಿರುವ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ 25,000 ರೂ.ಗಳ ಸಂಬಳ ಬರುತ್ತದೆ. ಇವರಿಗೆ 11,000 ರೂ.ಗಳ ಸಂಬಳ ಕೊಡುತ್ತಾರೆ ಏನಿದು? ಒಂದು ತಿಂಗಳಿನಿಂದ ಶಾಲೆ ನಡೆಯುತ್ತಿಲ್ಲ.